# ಓವೇರಿಯನ್ ಸಿಸ್ಟ್ (ಅಂಡಾಶಯದ ನೀರ್‌ಚೀಲ)

ಅಂಡಕೋಶ ಮಹಿಳೆಯ ಸಂತಾನೋತ್ಪತ್ತಿ ವ್ಯವಸ್ಥೆಯ ಮುಖ್ಯ ಅಂಗ. ಅದು ಮಹಿಳೆಯ ಗರ್ಭಕೋಶದ ಎರಡೂ ಬದಿ ವ್ಯಾಪಿಸಿಕೊಂಡಿದೆ. ಎಲ್ಲಾ ಚಟುವಟಿಕೆಗಳು ಸಮರ್ಪಕವಾಗಿ ನಡೆದರೆ ಸಂತಾನೋತ್ಪತ್ತಿಗೆ ಯಾವುದೇ ಸಮಸ್ಯೆ ಉದ್ಭವಿಸುವುದಿಲ್ಲ. ಆದರೆ ಕೆಲವೊಂದು ಕಾರಣಗಳಿಂದಾಗಿ ಅಂಡಕೋಶದಲ್ಲಿ ಅಂಡಾಣು ಉತ್ಪತ್ತಿ ಆಗಲು ಅಡೆತಡೆಗಳು ಉಂಟಾಗುತ್ತವೆ. ಅದರಲ್ಲಿ ಸಿಸ್ಟ್ ಸಮಸ್ಯೆ ಕೂಡ ಒಂದು.

**ಏನಿದು ಸಿಸ್ಟ್?**

ಅಂಡಕೋಶದಲ್ಲಿ ನೀರು ತುಂಬಿಕೊಂಡ ಚಿಕ್ಕ ಚೀಲದಂತಹ ರಚನೆಯೇ ಸಿಸ್ಟ್ ಎಂದು ಕರೆಯಿಸಿಕೊಳ್ಳುತ್ತದೆ. ಆ ಸಿಸ್ಟ್ ರಕ್ತದಿಂದ ಕೂಡಿದ್ದರೆ 'ಹೆಮೋರೇಜ್ ಸಿಸ್ಟ್' ಎಂದೂ ಅದು ನೀರಿನಿಂದ ತುಂಬಿಕೊಂಡಿದ್ದರೆ ಅದನ್ನು 'ಕ್ಲಿಯರ್ ಸಿಸ್ಟ್' ಎಂದು ಹೇಳಲಾಗುತ್ತದೆ. ಈ ತೆರನಾದ ಸಿಸ್ಟ್‌ಗಳು 5 ಸೆಂ.ಮೀ.ಗಿಂತ ಕಡಿಮೆ ಗಾತ್ರ ಹೊಂದಿದ್ದಲ್ಲಿ, ಅವು ಕ್ರಮೇಣ ಇನ್ನಷ್ಟು ಕುಗ್ಗಿ ಹೊರಟೇಹೋಗಬಹುದು.

**ಏನೇನು ಲಕ್ಷಣಗಳು?**

- ಸಿಸ್ಟ್ ಇರುವ ಭಾಗದಲ್ಲಿ ನೋವಿನ ಅನುಭವ.
- ಹೊಟ್ಟೆ ಉಬ್ಬರಿಸಿದಂತಾಗಬಹುದು.
- ಸ್ತನಗಳಲ್ಲೂ ನೋವು ಇರಬಹುದು.
- ಅನಿಯಮಿತ ರಕ್ತಸ್ರಾವ.
- ಸಮಾಗಮದ ಸಮಯದಲ್ಲೂ ವಿಪರೀತ ನೋವು.
- ಬಂಜೆತನ.

ಈ ಮೇಲ್ಕಂಡ ಲಕ್ಷಣಗಳು 15 ರಿಂದ 45 ವಯೋಮಿತಿಯ ಮಹಿಳೆಯರಲ್ಲಿ ಹೆಚ್ಚು ಕಾಣಿಸಿಕೊಳ್ಳಬಹುದು. ದೇಹದಲ್ಲಿ ಹಾರ್ಮೋನುಗಳ ಅಸಮತೋಲನದಿಂದ ಬಹುತೇಕ ಸಿಸ್ಟ್‌ಗಳು ಉದ್ಭವಿಸುತ್ತವೆ. ಇದಕ್ಕೆ ನಿಖರವಾದ ಕಾರಣ ತಿಳಿದಿಲ್ಲ.

**ಸಿಸ್ಟ್‌ನ ಪ್ರಕಾರಗಳು**

ಸಿಸ್ಟ್‌ನಲ್ಲಿ ಅನೇಕ ಪ್ರಕಾರಗಳಿವೆ. ಪ್ರಮುಖವಾದವುಗಳೆಂದರೆ ಪಿಸಿಓಡಿ ಸಿಸ್ಟ್, ಎಂಡೊಮೆಟ್ರಿಯೋಟಿಕ್ ಸಿಸ್ಟ್, ಡರ್ಮಾಯ್ಡ್ ಸಿಸ್ಟ್ ಹಾಗೂ ಕ್ಯಾನ್ಸರ್ ಸಿಸ್ಟ್.

**ಸೆರೋಸ್ ಮತ್ತು ಮ್ಯೂಕಸ್ ಸಿಸ್ಟ್**


ಇವೆರಡೂ ಬಹಳ ಸಾಮಾನ್ಯವಾಗಿ ಕಾಣಿಸಕೊಳ್ಳುವ ಸಿಸ್ಟ್‌ಗಳಾಗಿವೆ.

**ಪಿಸಿಓಡಿ ಸಿಸ್ಟ್:**

ಹಾರ್ಮೋನುಗಳ ಅಸಮತೋಲನದಿಂದ ಈ ಬಗೆಯ ಸಿಸ್ಟ್‌ಗಳು ಉದ್ಭವಿಸುತ್ತವೆ. ಇಂತಹ ಸ್ಥಿತಿಯಲ್ಲಿ ಅಂಡಾಣುಗಳ ಗಾತ್ರ ಏಕರೀತಿಯಾಗಿ ಉಳಿದುಬಿಡುತ್ತದೆ. ಬಿಡುಗಡೆಯಾಗಿ ಹೋಗಬೇಕಾದ ಅಂಡಾಣು ಕೂಡ ಹಾಗೆಯೇ ಇರುತ್ತದೆ:

ಈ ಸ್ಥಿತಿಯಲ್ಲಿ ಅಂಡಾಣುಗಳ ಗಾತ್ರ ಏಕರೀತಿಯಾಗಿ ಉಳಿದುಬಿಡುತ್ತದೆ. ಬಿಡುಗಡೆಯಾಗಿ ಹೋಗಬೇಕಾದ ಅಂಡಾಣು ಕೂಡ ಹಾಗೆಯೇ ಇರುತ್ತದೆ:

ಈ ಸ್ಥಿತಿಯಲ್ಲಿ ಕೆಳಕಂಡ ಲಕ್ಷಣಗಳು ಕಂಡುಬರುತ್ತವೆ.




- ಅನಿಯಮಿತ ಋತುಚಕ್ರ. ಋತುಚಕ್ರ ಬಂದಾಗ ಅತಿ ರಕ್ತಸ್ರಾವದ ಜೊತೆಗೆ ನೋವು ಕೂಡ ಇರುತ್ತದೆ.
- ಹದಿ ವಯಸ್ಸಿನವರಲ್ಲಿ ಮೊಡವೆಗಳು ಅತಿಯಾಗಿ ಕಾಣಿಸಿಕೊಳ್ಳುತ್ತವೆ. ಮುಖದಲ್ಲಿ ಕೂದಲು ಕೂಡ ಏಳುತ್ತವೆ.
- ತಲೆಗೂದಲು ಉದುರುತ್ತವೆ.

ಈ ಹಂತದಲ್ಲಿ ನಿರ್ಲಕ್ಷ್ಯ ತೋರದೆ ವೈದ್ಯರ ಬಳಿ ಹೋಗಿ ತೋರಿಸಿಕೊಂಡರೆ ಬೇಗ ಅದನ್ನು ಗುಣಪಡಿಸಬಹುದು.

ವಿವಾಹಿತರು ಪಿಸಿಓಡಿ ಸಮಸ್ಯೆಯಿಂದ ಬಳಲುತ್ತಿದ್ದರೆ ಅದು ಬಂಜೆತನಕ್ಕೂ ಕಾರಣವಾಗಬಹುದು.

**ಎಂಡೊಮೆಟ್ರಿಯೋಟಿಕ್ ಸಿಸ್ಟ್:**

ಋತುಸ್ರಾವ ಒಮ್ಮೊಮ್ಮೆ ಬರಬೇಕಾದ ಮಾರ್ಗವನ್ನು ಬಿಟ್ಟು ಫೆಲೋಪಿಯನ್ ಟ್ಯೂಬ್‌ಗಳ ಮೂಲಕ ಗರ್ಭಕೋಶ ಹಾಗೂ ಇತರೆಡೆ ಪ್ರವೇಶಿಸುತ್ತದೆ. ಅದೇ ರಕ್ತಸ್ರಾವ ಅಲ್ಲಿ ಹೆಪ್ಪುಗಟ್ಟಿ ಸಿಸ್ಟ್ ರಚನೆಯಾಗುತ್ತದೆ. ಹಾರ್ಮೋನುಗಳ ಪ್ರಭಾವದಿಂದ ಅದು ಕಂದು ಬಣ್ಣ ಪಡೆದುಕೊಳ್ಳುತ್ತದೆ. ಹೀಗಾಗಿ ಅದನ್ನು 'ಚಾಕ್ಲೆಟ್ ಸಿಸ್ಟ್' ಎಂದು ಹೇಳಲಾಗುತ್ತದೆ. ಇಂತಹ ಸ್ಥಿತಿಯಲ್ಲಿ ಮುಟ್ಟಾಗುವ ಮುನ್ನ ಹಾಗೂ ನಂತರ ತುಂಬಾ ನೋವು ಉಂಟಾಗುತ್ತದೆ.

**ಡರ್ಮಾಯ್ಡ್ ಸಿಸ್ಟ್:**

ಇದು ವಿಚಿತ್ರ ಬಗೆಯ ಸಿಸ್ಟ್ ಇದು ಹಲ್ಲು, ಕೂದಲು, ಉಗುರು, ಕೊಬ್ಬಿನಾಂಶ ಮುಂತಾದವನ್ನು ಒಳಗೊಂಡಿರುತ್ತದೆ. ಅಂಡಾಶಯದಲ್ಲಿ ಈ ತೆರನಾದ ಸಿಸ್ಟ್‌ಗಳು ತಿರುಚಿದಂತಾಗಿ ರಕ್ತಪೂರೈಕೆ ಕುಂಠಿತಗೊಂಡು ಅಧಿಕ ನೋವು ಅನಿಸುತ್ತದೆ.

**ಕ್ಯಾನ್ಸರ್‌ಸಿಸ್ಟ್:**

ಯಾವುದೇ ಬಗೆಯ ಕ್ಯಾನ್ಸರ್ ಸಿಸ್ಟ್ ನಮಗೆ ದೊಡ್ಡದಾದಾಗ ಮಾತ್ರ ಗೊತ್ತಾಗುತ್ತದೆ. ಈ ಬಗೆಯ ಸಿಸ್ಟ್‌ಗಳು ಬಹುವೇಗದಲ್ಲಿ ಬೆಳೆಯುತ್ತವೆ. ಆದರೆ ಯಾವುದೇ ಲಕ್ಷಣಗಳನ್ನು ತೋರಿಸುವುದಿಲ್ಲ. ಹೊಟ್ಟೆಯಲ್ಲಿ ಗ್ಯಾಸ್ಟ್ರೈಟಿಸ್ ಉಬ್ಬರ, ವಾಂತಿ ಮುಂತಾದ ಲಕ್ಷಣಗಳು ಗೋಚರಿಸುತ್ತವೆ.

ಇದನ್ನು ಕೆಲವು ವೈದ್ಯರು ತಪ್ಪಾಗಿ ಭಾವಿಸಿ ಗ್ಯಾಸ್ಟ್ರೈಟಿಸ್‌ಗೆ ಚಿಕಿತ್ಸೆ ಕೊಡುತ್ತಾರೆ. ಆಂತರಿಕ ಪರೀಕ್ಷೆ ಮಾಡಿದಾಗಲೇ ಎಲ್ಲವೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅಲ್ಟ್ರಾಸ್ಕ್ಯಾನ್, ಸಿಟಿಸ್ಕ್ಯಾನ್, ಎಂಆರ್‌ಐ ಸ್ಕ್ಯಾನ್‌ಗಳಿಂದ ಸಿಸ್ಟ್‌ನ ಸ್ಥಿತಿಗತಿ ಏನು ಎಂಬುದು ತಿಳಿಯುತ್ತದೆ. ಬಳಿಕವೇ ಚಿಕಿತ್ಸೆಯ ವಿಧಾನ ನಿರ್ಧರಿಸಬೇಕಾಗುತ್ತದೆ.

**ಸಿಸ್ಟ್‌ಗೆ ಚಿಕಿತ್ಸೆ:**

ಹಲವು ಬಗೆಯ ಸಿಸ್ಟ್ ಗಳನ್ನು ಕೇವಲ ಔಷಧಿ, ಮಾತ್ರೆಗಳಿಂದಲೇ ಗುಣಪಡಿಸಬಹುದು. ಕೆಲವೊಂದು ಬಗೆಯ ಸಿಸ್ಟ್‌ಗಳು ಗರ್ಭನಿರೋಧಕ ಮಾತ್ರೆಗಳ ಸೇವನೆಯಿಂದ ತಮ್ಮ ಅಸ್ತಿತ್ವ ಕಳೆದುಕೊಳ್ಳುತ್ತವೆ.

ಪಿಸಿಓಡಿ ಸಿಸ್ಟ್‌ಗಳನ್ನು ಡ್ರಿಲ್ಲಿಂಗ್ ಮೂಲಕ ನಿವಾರಿಸಲಾಗುತ್ತದೆ. ನೀರ್ಗುಳ್ಳೆಗಳನ್ನು ಪಂಕ್ಚರ್ ಮಾಡಿ ಅಂಡಾಶಯವನ್ನು ಸ್ವಚ್ಛಗೊಳಿಸಿ ಅಲ್ಲಿ ಅಂಡಾಣು ಉತ್ಪತ್ತಿಗೆ ಅವಕಾಶ ಕಲ್ಪಿಸಲಾಗುತ್ತದೆ. ಬಂಜೆತನದ ಸಮಸ್ಯೆ ಇದ್ದವರಿಗೆ ಮಾತ್ರ ಪಿಸಿಓಡಿ ಡ್ರಿಲ್ಲಿಂಗ್ ಪ್ರಕ್ರಿಯೆ ನಡೆಸಲಾಗುತ್ತದೆ.

**ಮೆನೊಪಾಸ್ ಆದ ಬಳಿಕ**

ಮುಟ್ಟು ನಿಂತವರು ಸಿಸ್ಟ್‌ನ ಸಮಸ್ಯೆಯಿಂದ ಬಳಲುತ್ತಿದ್ದರೆ, ಅದು ಕ್ಯಾನ್ಸರ್ ಸಿಸ್ಟ್ ಆಗಿರುವ ಸಾಧ್ಯತೆ ಹೆಚ್ಚಿರುತ್ತದೆ. ಅಂಥವರು ಪೆಲ್ವಿಕ್ ಎಕ್ಸಾಮಿನೇಶನ್, ಪೆಲ್ವಿಕ್ ಅಲ್ಟ್ರಾಸೌಂಡ್ ಪರೀಕ್ಷೆಗೆ ಒಳಗಾಗಬೇಕು.

**ಸಿಸ್ಟ್‌ಗೆ ಶಸ್ತ್ರಚಿಕಿತ್ಸೆ:**

ಯಾವುದೇ ಬಗೆಯ ಸಿಸ್ಟ್‌ಗಳನ್ನು ಯಾವುದೇ ಗಾತ್ರದ ಸಿಸ್ಟ್‌ಗಳನ್ನು ಲ್ಯಾಪ್ರೋಸ್ಕೋಪಿಕ್ ಶಸ್ತ್ರಚಿಕಿತ್ಸೆಯ ಮೂಲಕ ನಿವಾರಿಸಿಕೊಂಡು ರೋಗಿ ಆ ದಿನವೇ ಮನೆಗೆ ಹೋಗಬಹುದು.

– ಡಾ|| ಬಿ. ರಮೇಶ್




## ಸಿಸ್ಟ್‌ಗೆ ಸಂಬಂಧಿದ ಹೆಚ್ಚಿನ ಮಾಹಿತಿ ಮತ್ತು ಚಿಕಿತ್ಸೆಗಾಗಿ ಸಂಪರ್ಕಿಸಿ:

**ಆಲ್ಟಿಯಸ್ ಹಾಸ್ಪಿಟಲ್**

( Unit of Dr. Ramesh Hospital)

**ಹೈಟೆಕ್ ಲ್ಯಾಪ್ರೋಸ್ಕೊಪಿ & ಗೈನೊಕಾಲಜಿ ಹಾಸ್ಪಿಟಲ್**

**ರಾಜಾಜಿನಗರ:**
ನಂ.6/63, 59ನೇ ಅಡ್ಡರಸ್ತೆ, 4ನೇ ಬ್ಲಾಕ್,
ರಾಜಾಜಿನಗರ ಎಂಟ್ರೆನ್ಸ್, ಎಂ.ಇ.ಐ. ಪಾಲಿಟೆಕ್ನಿಕ್ ಎದುರು,
ರಾಮಮಂದಿರ ಹತ್ತಿರ, ಬೆಂಗಳೂರು–10.
ಫೋ: 080-23151873 Mob: 9900031842

**ರಾಜರಾಜೇಶ್ವರಿನಗರ:**
ನಂ.915, 1ನೇ ಮಹಡಿ, ಧನುಷ್ ಪ್ಲಾಜಾ,
ಐಡಿಯಲ್ ಹೋಮ್ಸ್ ಟೌನ್‌ಷಿಪ್, ಗೋಪಾಲನ್‌ಮಾಲ್ ಹತ್ತಿರ,
ರಾಜರಾಜೇಶ್ವರಿನಗರ, ಬೆಂಗಳೂರು–98.
ಫೋ: 080-28606789 Mob: 9663311128

E-mail: endoram2006@yahoo.in, Website: www.laparoscopicsurgeries.com